ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 274/2024**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಮಹದೇವ್ | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ಶ್ರೀ. ದೇವರಾಜು | 2 | 4 |
| ವಯಸ್ಸು | 36 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **02.03.2026.** | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಗಿರಿಗೌಡನದೊಡ್ಡಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನನಗೆ ಆರೋಪಿತರ ಪರಿಚಯ ಇದೆ. ಚಾಸಾ.1 ರವರು ನನ್ನ ತಂದೆ. ಚಾಸಾ. 3, 4, 6 ಮತ್ತು 7 ರವರ ಪರಿಚಯ ಇದೆ. ಚಾಸಾ. 5 ಮಹೇಶ್ ನನ್ನ ತಮ್ಮ. 2024 ರಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೆ. ಆರೋಪಿತರು ನಮ್ಮ ಊರಿನವರು. ಆರೋಪಿತರು ಬೇರೆ ಬೇರೆ ಕೆಲಸಗಳನ್ನು ಮಾಡುತ್ತಾರೆ. ದಿನಾಂಕ 19.04.2024 ರಂದು ರಾತ್ರಿ 10.30 ಕ್ಕೆ ನಾನು ನನ್ನ ಮನೆಯ ಬಳಿ ಇದ್ದಾಗ ನನ್ನ ಸ್ನೇಹಿತ ಸುದರ್ಶನ್ ಅವರ ಮನೆ ಬಳಿ ಡ್ರಾಪ್ ಮಾಡುವಂತೆ ಕೇಳಿದ್ದು ನಾನು ಆಕ್ಟೀವ್ ಹೊಂಡಾದಲ್ಲಿ ಪಕ್ಕದ ಏರಿಯಾದಲ್ಲಿ ಇರುವ ಅವರ ಮನೆಗೆ ಬಿಡಲು ಹೋದೆ. ಆರೋಪಿ ನಂ. 2 ರವರು ನನ್ನ ಬೈಕ್ ಅನ್ನು ಅಡ್ಡಗಟ್ಟಿದ್ದ ಆಗ ನಾನು ಹತ್ತಿರಕ್ಕೆ ಹೋದೆ. ಆಗ ಆರೋಪಿ ನಂ. 3 ರವರು ಏಕಾಏಕಿ ಬಂದು ಪೈಪ್ ನಿಂದ, ಆರೋಪಿ ನಂ. 5 ರವರು ದೊಣ್ಣೆಯಿಂದ ಹೊಡೆದ. ನಂತರ ಎಲ್ಲಾ ಆರೋಪಿತರು ಸೇರಿ ಪೈಪ್, ಕಲ್ಲು, ದೊಣ್ಣೆ ಮತ್ತು ಕೈಗಳಿಂದ ನನ್ನ ಹೊಟ್ಟೆ, ಬೆನ್ನಿಗೆ ಕಣ್ಣಿಗೆ ಹೊಡೆದರು. ನನಗೆ ಪ್ರಜ್ಞೆ ಹೊಯಿತು. ಆಗ ನನ್ನ ಸ್ನೇಹಿತ ಸುದರ್ಶನ್ ಹೆದರಿಕೊಂಡು ಮನೆಗೆ ಹೊರಟು ಹೋದ. ಮಹೇಶ್, ಸುರೇಶ್ ಮತ್ತು ಬ್ಯಾಟರಾಜು ನನ್ನ ತಂದೆಯನ್ನು ಕರೆದುಕೊಂಡು ಬರಲು ಹೋಗಿದ್ದರು. ನನ್ನ ತಂದೆ ಬಂದು ನೀರು ಕೊಡಿಸಲು ಪ್ರಯತ್ನಪಟ್ಟರು ಯಾರು ನೀರನ್ನು ಕೊಡಲಿಲ್ಲ ಮತ್ತು ಕುಡಿಸಲು ಬಿಡಲಿಲ್ಲ. ನಂತರ ಅಂಬುಲೇನ್ಸ್ ನಲ್ಲಿ ದಯಾನಂದ ಸಾಗರ್ ಆಸ್ಪತ್ರೆಗೆ ಕರೆದುಕೊಂಡು ಹೋದರು.

2. ನನ್ನ ಬೆನ್ನಿನ ಮೂಳೆ ಮುರಿದಿದ್ದು ಈಗಲೂ ಕುಳಿತುಕೊಂಡರೆ ಎದ್ದೇಳಲು ಆಗುವುದಿಲ್ಲ. 4 ನೇ ಆರೋಪಿ ಪಂಚಾಯ್ತಿ ಚುನಾವಣೆ ನಿಂತಿದ್ದು, ನಾವು ಗುಂಡಪ್ಪ ಎನ್ನುವವರಿಗೆ ಸಪೋರ್ಟ ಮಾಡಿದ್ದೆವು. ಆ ದ್ವೇಷದಿಂದ ನನಗೆ ಹೊಡೆದಿರುತ್ತಾರೆ. 4 ನೇ ಆರೋಪಿ ಚುನಾವಣೆಯಲ್ಲಿ ಗೆದ್ದರು. ನಾನು ಆಸ್ಪತ್ರೆಯಲ್ಲಿ ಇದ್ದಾಗ ಹೇಳಿಕೆ ನೀಡಿದ್ದೇನೆ. ಸದರಿ ಹೇಳಿಕೆಯನ್ನು ನಿಶಾನೆ.ಪಿ. 5 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 5 (ಎ) ಎಂದು ಗುರುತಿಸಲಾಯಿತು. ನಾನು ಹೇಳಿಕೆ ನೀಡುವಾಗ ವೈದ್ಯರು ಇತ್ತು. ಸಾಕ್ಷಿ ಮು.ಮಾ. 5 ಅನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ. 1 ರಿಂದ 4 ಅನ್ನು ಗುರುತಿಸುವುದಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಭಾಗಶಃ ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ಘಟನೆ ದಿನ ನನಗೆ ಮು.ಮಾ. 4 / ಕಲ್ಲಿಂದ ಹೊಡೆದರು ಎಂದರೆ ಸರಿ. ಮು.ಮಾ. 1 ರಿಂದ 3 ಅನ್ನು ಬಳಸಿ ಆರೋಪಿತರು ಹಲ್ಲೆ ಮಾಡಿದ್ದರು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ : SSG ವಕೀಲರಿಂದ : ಸಮಯ ಕೋರಿದ್ದು, ರೂಪಾಯಿ 500/- ಖರ್ಚಿನೊಂದಿಗೆ ಮುಂದೂಡಲಾಯಿತು.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.